

ಮತ್ತೆ ಎರಡೂವರೆಗೆ ಮೂರನೆಯ ಗೋಷ್ಠಿಗೆ ಚಾಲನೆ. ಈ ವೇದಿಕೆ ಈ ರೀತಿ ಇದ್ದರೆ ಹೆಚ್ಚು ಪರಿಣಾಮಕಾರಿಯಾದೀತೆಂದು ಸೂಚಿಸಿದವರು ಲೋಹಿತೇಶ್ವರರೇ. ‘ಈ ಅರವತ್ತೈದರ ವಯಸ್ಸಿನಲ್ಲೂ ಯುವಕರನ್ನು ಮೀರಿಸುವ ಅವರ ಕ್ರಿಯಾಶೀಲತೆಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೇ? ನಿಮ್ಮಿಂದ ನಾವು ಕಲಿಯಬೇಕಾದ್ದು ಬಹಳಷ್ಟಿದೆ ಸರ್. ಮೊದಲ ಗೋಷ್ಠಿಗೆ ಚಾಲನೆ ಕೊಡುವ ಮುನ್ನ ನಿಮಗಾಗಿ ನಾವೊಂದು ವಿಶೇಷ ಗೌರವ ಸಮರ್ಪಣೆ ಮಾಡಬೇಕೆಂದುಕೊಂಡಿದ್ದೇವೆ. ಇದನ್ನು ನಿಮ್ಮ ಗಮನಕ್ಕೆ ತರದಿರುವುದಕ್ಕೆ ಕ್ಷಮೆ ಇರಲಿ ಸರ್. ದಯವಿಟ್ಟು ತಾವೊಮ್ಮೆ ವೇದಿಕೆ ಮೇಲೆ ಬಂದು ನಮ್ಮ ಗೌರವ ಸ್ವೀಕರಿಸಬೇಕು’ ಅಂದ. ಇದೊಳ್ಳೆ ಫಜೀತಿ ತಂದಿಟ್ಟರಲ್ಲ ಅಂದುಕೊಳ್ಳುತ್ತಾ ಕೈಲ್ಲಿದ್ದ ಸಿಗರೇಟು ಆರಿಸಿ ಲೋಹಿತೇಶ್ವರ ಒಳ ಹೊರಟ.

ಅದು ನಗರದ ಹೊರವಲಯದಲ್ಲಿ ಹೊಸದಾಗಿ ಆರಂಭವಾದ ಥಿಯೇಟರ್ ಮಾದರಿಯ ಸಭಾಂಗಣ; ಆ ಸಭಾಂಗಣದಲ್ಲಿ ಅಷ್ಟೇ ವಿಶಿಷ್ಟವೆನಿಸುವ ಎರಡು ದಿನಗಳ ಕಾವ್ಯ ಮಂಥನ ಸಂವಹನ ಎಂಬ ರಾಜ್ಯಮಟ್ಟದ ಕಾವ್ಯ ಸಂಕಿರಣ. ಅಲ್ಲಿ ಸುಡುವ... ಮಿಡಿಯುವ... ಕಂಪಿಸುವ ಕವಿತೆಗಳನ್ನು ಬರೆಯುವ